ಇ) ಪ್ರಾರಂಭಿಕ ವರದಿ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ --ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರ ಬಯಸಿದ ಎಲ್ಲ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಕುದುರೆಮುಖ ಯೋಜನೆ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸುವುದು

257(738) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).--ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.--

ಅ) ಕುದುರೆಮುಖ ಯೋಜನೆ ಪ್ರದೇಶದಲ್ಲಿ ಕೆಲಸ ಮುಗಿದಿದ್ದು ಭಾರಿ ಪ್ರಮಾಣದಲ್ಲಿ ಅರಣ್ಯ ಭೂಮಿಯು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅಲ್ಲಿ ಅರಣ್ಯ ಬೆಳೆಸಲು ಇರುವ ತೊಂದರೆಗಳೇನು ;

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--ಅ) ಬಂದಿದೆ. ಆದರೆ ಅರಣ್ಯ ಪ್ರದೇಶವನ್ನು ಭಾರಿ ಪ್ರಮಾಣದಲ್ಲಿ ಖಾಲಿಯಾಗಲು ಅವಕಾಶ ಕೊಟ್ಟಿಲ್ಲ.

ಆ) ಅವಶ್ಯಕತೆ ಇದ್ದ ಸ್ಥಳಗಳಲ್ಲಿ ಅರಣ್ಯ ಬೆಳೆಸಲು ಪ್ರಯತ್ನ ನಡೆಯುತ್ತಿದೆ.

259(806) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).-- ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;

ಅ) ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ಹಾಗೂ ಅವರ ಅಭಿವೃದ್ಧಿಗೆ ಸರಕಾರದವರು ಕೈಕೊಂಡ ಕ್ರಮವೇನು ;

ಆ) ಖಾಸಗಿಯವರು ಮೇಲ್ಕಂಡ ಜಮೀನನ್ನೇದರೂ ಒತ್ತುವರಿ ಮಾಡಿಕೊಂಡಿರುವರೇ ;

ಇ) ಹಾಗಿದ್ದಲ್ಲಿ ಒತ್ತುವರಿ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಅವರ ವಿರುದ್ಧ ಕೈಕೊಂಡ ಕ್ರಮವೇನು ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--

ಅ)

	ಹೆಕ್ಟೇರುಗಳಲ್ಲಿ
ರಾಜ್ಯ ಅರಣ್ಯ	15049-76
ಸಿ ಮತ್ತು ಡಿ ವರ್ಗದ ಭೂಮಿ	2483-06
ಒಟ್ಟು :	17532-82

ಮೇಲಿನ ಭೂಮಿಗಳ ಪೈಕಿ 1479 ಹೆಕ್ಟೇರುಗಳಲ್ಲಿ ಅರಣ್ಯವನ್ನು ಬೆಳೆಸಲಾಗಿದೆ. ಅಲ್ಲದೆ, ವರ್ಷಕ್ಕೆ ಪ್ರತಿ 100 ಹೆಕ್ಟೇರಿನಲ್ಲಿ ಬೇರೆ ಬೇರೆ ಯೋಜನೆಗಳಲ್ಲಿ ಅಂದರೆ ಎನ್. ಆರ್. ಇ. ಪಿ. ಸಾಮಾಜಿಕ ಅರಣ್ಯ ಡಿ. ಪಿ. ಎ. ಪಿ. ಇವುಗಳಲ್ಲಿ ಅರಣ್ಯ ಬೆಳೆಸಲಾಗುವುದು.

ಆ) ಹೌದು.

ಇ) ಮೇಟಿಕುರ್ಕೆ ರಾಜ್ಯ ಅರಣ್ಯದಲ್ಲಿ 87 08 ಹೆಕ್ಟೇರಿನಷ್ಟು ಪ್ರದೇಶವನ್ನು 94 ಜನರು 27-4-78 ರ ಪೂರ್ವದಲೇ ಅತಿಕ್ರಮಣ ಮಾಡಿಕೊಂಡಿದ್ದು, ಈ ಪ್ರಕರಣಗಳು ಹಾಸನದ ಜಿಲ್ಲಾಧಿಕಾರಿ ಮತ್ತು ಅರಸೀಕೆರೆ ಮುನ್ಸೀಫ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಉಳಿದಿದೆ. ಗರುಡನಗಿರಿ ರಾಜ್ಯ ಅರಣ್ಯದಲ್ಲಿ 60-72 ಹೆಕ್ಟೇರಿನಷ್ಟು ಅರಣ್ಯ ಭೂಮಿಯನ್ನು 50 ಜನರು ಅಕ್ರಮಿಸಿಕೊಂಡಿರುತ್ತಾರೆ. ಈ ಅತಿಕ್ರಮಣಗಳು 27-4-1978 ರ ಇತ್ತೀಚೆಗೆ ಸಂಬಂಧಪಟ್ಟವುಗಳು. ಅರಣ್ಯ ಸಂರಕ್ಷಣಾ ಕಾಯಿದೆ 1980 ರ ಪ್ರಕಾರ ಈ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ. ಕಾನೂನು ರೀತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಭದ್ರಾ ಮೇಲ್ದಂಡೆ ಯೋಜನೆಯ ಮುಳುಗಡೆ ಪ್ರದೇಶದಲ್ಲಿ 'ಅರಣ್ಯ ಸಂಪತ್ತಿಗೆ ಬೆಲೆ ನಿಗದಿ ಪಡಿಸುವುದು

258 (737) ಶ್ರೀ ಪಿ. ತಿಪ್ಪಯ್ಯ.--(ಮೂಡಿಗೆರೆ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಮೇಲ್ತಂಡೆ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಅರಣ್ಯ ಸಂಪತ್ತಿನ ಬೆಲೆ ನಿಗಧಿ ಪಡಿಸುವ ಕಾರ್ಯ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸರ್ಕಾರದವರ ಇತಿ ನಿಯಮಕ್ಕೆ ಅನುಗುಣವಾಗಿದೆಯೇ ;

ಇ) ಉರುವಲು ಕಟ್ಟಿಗೆ ಮತ್ತು ರೈತರಿಗೆ ಅಗತ್ಯವಾದ ಬೇಸಾಯ ಸಾಮಗ್ರಿಗಳಿಗೆ ಸರ್ಕಾರ ಅನುಸರಿಸುತ್ತಿರುವ ನಿಯಮ ಯಾವುದು ;

ಈ) ಮಲೆನಾಡಿನ ನೆರೆಹೊಲ್ಲಿರುವ ಗ್ರಾಮಾಂತರ ಪ್ರದೇಶಗಳಿಗೆ ಇದರಿಂದ ವಿನಾಯತಿ ಕೊಡಲು ಯಾವುದಾದರು ಕ್ರಮವನ್ನು ಸರ್ಕಾರವು ಅನುಸರಿಸುತ್ತಿದೆಯೇ ?

ಉ) ಹಾಗಿದ್ದಲ್ಲಿ ಈ ಬಗೆ ಸರ್ಕಾರವು ಅನುಸರಿಸುತ್ತಿರುವ ನೀತಿ ಏನು ?

ಶ್ರೀ ಜೀವಿಜಯ ಅರಣ್ಯ ರಾಜ್ಯ ಮಂತ್ರಿಗಳು)

ಅ) ಭದ್ರಾ ಮೇಲ್ದಂಡೆ ಯೋಜನೆ ಅನ್ವಯ ಮುಳುಗಡೆಯಾಗಲಿರುವ ಸುಮಾರು 690 ಹೆಕ್ಟೇರ್ ಅರಣ್ಯ ಸಂಪತ್ತಿನ ಬೆಲೆ ನಿಗಧಿ ಪಡಿಸುವ ಕಾರ್ಯ ಗಮನಕ್ಕೆ ಬಂದಿದೆ.

ಆ) ಭಾರತ ಸರ್ಕಾರದ ಅರಣ್ಯ ಸಂರಕ್ಷಣೆ ಕಾಯಿದೆ 1980 ರ ಪ್ರಕಾರ ಈ ಪ್ರದೇಶದಲ್ಲಿ ಅರಣ್ಯ ಸಂಪತ್ತು ಹೆಚ್ಚು ಇರುವುದರಿಂದ ಈ ಪ್ರದೇಶವನ್ನು ಬಿಡುಗಡೆ ಮಾಡಲು ಬರುವುದಿಲ್ಲ.

ಇ) ಅಗತ್ಯವಾದ ಉರುವಲು ಕಟ್ಟಿಗೆ ಮತ್ತು ಬೇಸಾಯ ಸಾಮಾಗ್ರಿಗಳನ್ನು ಅರಣ್ಯದಿಂದ ತರಲು ರೈತರಿಗೆ ಕೆಲವು ರಿಯಾಯಿತಿಗಳನ್ನು ಸರ್ಕಾರ ಅನುಸರಿಸುತ್ತಿದೆ.

ಈ) ಮಲೆನಾಡಿನ ಗ್ರಾಮಾಂತರ ಪ್ರದೇಶಗಳಿಗೂ ವಿನಾಯಿತಿಗಳನ್ನು ಸರ್ಕಾರ ಅನುಸರಿಸುತ್ತಿದೆ.

ಉ) ಈ ಕೆಳಕಂಡ ವಿನಾಯಿತಿಗಳನ್ನು ಸರ್ಕಾರ ಮಲೆನಾಡಿನ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಿಗೆ ಕೊಡಲ್ಪಡುತ್ತಿದೆ.

ಅ) ತೆರೆದ ಅರಣ್ಯಗಳಲ್ಲಿ ದನಕರುಗಳನ್ನು ಮುಫತ್ತಾಗಿ ಮೇಯಿಸಲು ಬಿಡುವುದು

ಆ) ವಿಭಾಗ ಅರಣ್ಯಾಧಿಕಾರಿಯವರು ನಿಗಧಿಪಡಿಸಿದ ಅರಣ್ಯ ಪ್ರದೇಶದಲ್ಲಿ ಸ್ವಂತ ಉಪಯೋಗಕ್ಕೆ ಹಾಗೂ ಕೃಷಿಗೆ ಬೇಕಾದ ಕಲ್ಲು, ಮಣ್ಣು ಒಣ ಎಲೆಗಳು ಮತ್ತು ಹುಲ್ಲನ್ನು ತೆಗೆದುಕೊಳ್ಳಲು ಬಿಡುವುದು.

ಇ) ಒಣ ಸೌದೆಯನ್ನು ಅರಣ್ಯ ಪ್ರದೇಶಗಳಿಂದ ಸ್ವಂತ ಉಪಯೋಗಕ್ಕೆ ತಲೆ ಹೊರೆಯಲ್ಲಿ ತರಲು 8 ಕಿ. ಮೀ. ವರೆಗೂ ಅನುಮತಿ ಇದೆ.

ಈ) ಜಿಲ್ಲಾ ಅರಣ್ಯ ಮತ್ತು ಅಮೃತ ಮಹಲ್ ಕಾವಲಿನಿಂದ ಮುಳ್ಳು ಮತ್ತು ಪೊದೆಗಳನ್ನು ಯಾವ ಶುಲ್ಕವೂ ಇಲ್ಲದೆ ಕೃಷಿಕ ರೈತರಿಗೆ ಕೊಡಲಾಗುತ್ತಿದೆ.

ಉ) ಬೆಲೆಬಾಳದ ಒಣಗಿದ ಮರಗಳಿಂದ ಬೇಲಿಗೆ ಬೇಕಾಗುವ ಕಂಬಗಳನ್ನು ತರಲು ರೈತರಿಗೆ ಅನುಮತಿ ನೀಡಲಾಗುತಿದೆ.

Mr. Speaker.---I have received the following message from the Chairman, Karnataka Levislative Council.

ANNOUNCEMENT

"As required by rule 114 of the rules of procedure and conduct of business in the Karnataka Legislative Council, I send herewith the following Bills which have been agreed to by the Karnataka Legislative Council on 20th February, 1984 without amendments :

1) The Karnataka Inams Abolition Laws (Amendment) Bill, 1984;
2) The Karnataka Rent Control (Amendment) Bill, 1984."

ನಿಯಮ 334ರ ಮೇಲಿನ ಚರ್ಚೆ

(1) ಲೆವಿ ಭತ್ತದ ಸಂಗ್ರಹಣೆಯ ಬಗ್ಗೆ

ಶ್ರೀ ಜಿ. ಕೆ. ಸುಬ್ಬಯ್ಯ (ವಿರಾಜಪೇಟೆ).-- ಮಾನ್ಯ ಅಧ್ಯಕ್ಷರೆ, ನಮ್ಮ ಕೊಡಗು ಜಿಲ್ಲೆಯಲ್ಲಿ ಸಹ